ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)
ತಹಶೀಲ್ದಾರರವರ ಕಾರ್ಯಾಲಯ, ಕೂಡ್ಲಿಗಿ

ಸಂ/ಕಂ/ಪಹಣಿ:ವಿವಾದ/01/2015-16.	ದಿನಾಂಕ: 28-06-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಎ.ಸೈಯದ್ ಹುಸೇನ್ ತಂದೆ ಎ.ಎಂ.ಬಾಷಾಸಾಹೇಬ್ 03 ನೇ ವಾರ್ಡ ಅಜಾದ್‌ನಗರ ಹೌಸಿಂಗ್ ಬೋರ್ಡ ಕೂಡ್ಲಿಗಿ ಪಟ್ಟಣ ಕೂಡ್ಲಿಗಿ ತಾಲೂಕು<br>2)ಬಿ.ಅಹ್ಮದ್ ತಂದೆ ಲೇಟ್ ಬಿ.ಹಯಾತ್ ಸಾಬ್<br>3)ಬಿ.ಅನ್ವರ್ ತಂದೆ ಲೇಟ್ ಬಿ.ಹಯಾತ್ ಸಾಬ್<br>4)ಬಿ.ಸಿಖಂದರ್ ತಂದೆ ಲೇಟ್ ಬಿ.ಹಯಾತ್ ಸಾಬ್<br>5)ಬಿ.ಅಸ್ಲಾಂ ತಂದೆ ಲೇಟ್ ಬಿ.ಹಯಾತ್ ಸಾಬ್<br>13 ನೇ ವಾರ್ಡ ರಾಮನಗರ ಕೂಡ್ಲಿಗಿ ಪಟ್ಟಣ ಕೂಡ್ಲಿಗಿ ತಾಲೂಕು | ಕೆ.ಬಾಷಾಸಾಹೇಬ್ ತಂದೆ ಲೇಟ್ ಅಬ್ದುಲ್ ರಹಿಮಾನ್ ಸಾಬ್<br>03ನೇ ವಾರ್ಡ ಹೊಸಹಳ್ಳಿ ರಸ್ತೇ ಬಲಬಾಗ ಕೂಡ್ಲಿಗಿ ಪಟ್ಟಣ ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಕೂಡ್ಲಿಗಿ ಪಟ್ಟಣದ ಸನಂ 218/1.ಪೈಕಿ. ವಿಸ್ತೀರ್ಣ 0-84 ಸೆಂಟ್ಸು ಜಮೀನನ್ನು ಕ್ರಯ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಕೂಡ್ಲಿಗಿ ಪಟ್ಟಣದ ಸನಂ 218/1.ಪೈಕಿ. ವಿಸ್ತೀರ್ಣ 0-84 ಸೆಂಟ್ಸು ಜಮೀನನ್ನು ಸದರಿ ಪಟ್ಟಣದ ಬಿ.ಮಹ್ಮದ್ ತಂದೆ ಲೇಟ್ ಹಯಾತ್ ಸಾಬ್. ಬಿ.ಅನ್ವರ್ ತಂದೆ ಲೇಟ್ ಬಿ.ಹಯಾತ್ ಸಾಬ್. ಬಿ.ಸಿಖಂದರ್ ತಂದೆ ಲೇಟ್ ಬಿ.ಹಯಾತ್ ಸಾಬ್. ಬಿ.ಅಸ್ಲಾಂ ತಂದೆ ಲೇಟ್ ಹಯಾತ್ ಸಾಬ್ ಇವರಿಂದ ಸದರಿ ಪಟ್ಟಣದ ಎ.ಸೈಯದ್ ಹುಸೇನ್ ತಂದೆ ಎ.ಎಂ.ಬಾಷಾಸಾಹೇಬ್ ಇವರು ದಿನಾಂಕ 13-01-2016 ರ ಡಾಕ್ಯುಮೆಂಟ್ ನಂಬರ್: 3226/2015-16. ಪ್ರಕಾರ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಕೂಡ್ಲಿಗಿ ಇವರು ನಮೂನೆ-21 ರ ನೋಟಿಸನ್ನು ದಿನಾಂಕ 18-01-2016 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ಪಟ್ಟಣದ ಕೆ.ಬಾಷಾಸಾಹೇಬ್ ತಂದೆ ಲೇಟ್ ಅಬ್ದುಲ್ ರಹೀಮಾನ್ ಸಾಬ್ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 59/2015-16. ದಿನಾಂಕ 19-02-2016. ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 18-05-2016. ರಿಂದ 28-06-2016. ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಕೂಡ್ಲಿಗಿ ಪಟ್ಟಣದ ಸನಂ 218/1.ಪೈಕಿ. ವಿಸ್ತೀರ್ಣ 0-84 ಸೆಂಟ್ಸು ಜಮೀನು ಸದರಿ ಪಟ್ಟಣದ ಬಿ.ಮಹ್ಮದ್ ತಂದೆ ಲೇಟ್ ಬಿ. ಹಯಾತ್‌ಸಾಬ್.ಬಿ.ಅನ್ವರ್ ತಂದೆ ಲೇಟ್ ಬಿ.ಹಯಾತ್‌ಸಾಬ್.ಬಿ.ಸಿಖಂದರ್ ತಂದೆ ಲೇಟ್ ಬಿ.ಹಯಾತ್‌ಸಾಬ್. ಬಿ.ಅಸ್ಲಾಂತಂದೆ ಲೇಟ್ ಬಿ.ಹಯಾತ್‌ಸಾಬ್ ಇವರಿಂದ ದಿನಾಂಕ 13-01-2016 ರ

ಡಾಕ್ಯುಮೆಂಟ್ ನಂಬರ್: 3226/2015-16. ರ ಪ್ರಕಾರ ರೂ: 1.85.000/- ಗಳಿಗೆ ಖಂಡಿತ ಕ್ರಯಕ್ಕೆ ಖರೀದಿಸಿ ಕೂಡ್ಲಿಗಿಯ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಣಿ ಮಾಡಿಸಿ ಕೊಂಡಿರುತ್ತೇನೆ. ಕಾರಣ ಸದರಿ ಕ್ರಯ ಪತ್ರ ಪ್ರಕಾರ ನನ್ನ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಹಾಜರಾಗಿದ್ದು ಸದರಿ ವಿವಾದಿತ ಜಮೀನಿನಲ್ಲಿ ನನಗೆ ಹಿಸ್ಸಾ ಬರಬೇಕಾಗಿದೆ ನನಗೆ ಹಿಸ್ಸಾ ಕೊಡದೇ ಹಾಗೇ ಹಾಗೂ ನನಗೆ ತಿಳಿಸದೇ ಹಾಗೇ ಬೇರೆಯವರಿಗೆ ಕ್ರಯ ಪತ್ರ ಬರೆಯಸಿ ಕೊಟ್ಟಿರುತ್ತಾರೆ. ಕಾರಣ ಸದರಿ ಕ್ರಯ ಪತ್ರ ಪ್ರಕಾರ ಕ್ರಯದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ನನ್ನ ತಕರಾರು ಇರುವುದಾಗಿ ಕೋರಿರುತ್ತಾರೆ.

ದಿನಾಂಕ 28-06-2016 ರ ವಿಚಾರಣೆಯಲ್ಲಿ ಉಭಯರು ಹಾಜರಾಗಿದ್ದು ಸದರಿ ವಿವಾದಿತ ಜಮೀನಿನ ಬಗ್ಗೆ ಉಭಯರು ರಾಜಿಯಾಗಿ ಸನಂ 218/1. ವಿಸ್ತೀರ್ಣ 4-17. ಎಕ್ರೆ ಪೈಕಿ 0-21 ಸೆಂಟ್ಸು ಜಮೀನನ್ನು ನನಗೆ ಕೊಡಲು ಒಪ್ಪಿರುತ್ತಾರೆ. ಕಾರಣ ಸದರಿ ಕ್ರಯ ಪತ್ರ ಪ್ರಕಾರ ಕ್ರಯದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ನನ್ನ ಯಾವ ಆಕ್ಷೇಪಣೆಗಳು ಇಲ್ಲವೆಂದು ಹಾಗೂ ನನ್ನ ತಕರಾರು ಅರ್ಜಿಯನ್ನು ವಾಪಸ್ಸು ಪಡೆಯುತ್ತೇನೆಂದು ಲಿಖಿತ ಹೇಳಿಕೆಯನ್ನು ನೀಡಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳೀಕೆ ಮತ್ತು ತಕರಾರುದಾರರ ಹೇಳಿಕೆಗಳನ್ನು ಕೇಳಿ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಕೂಡ್ಲಿಗಿ ಪಟ್ಟಣದ ಸನಂ 218/1.ಪೈಕಿ. ವಿಸ್ತೀರ್ಣ 0-84 ಸೆಂಟ್ಸು ಜಮೀನನ್ನು ದಿನಾಂಕ 13-01-2016 ರ ಡಾಕ್ಯುಮೆಂಟ್ ನಂಬರ್: 3226/2015-16. ಕ್ರಯ ದಸ್ತಾವೇಜು ಪ್ರಕಾರ ಅರ್ಜಿದಾರರಾದ ಹಾಗೂ ಕ್ರಯದಾರರಾದ ಎ.ಸೈಯದ್ ಹುಸೇನ್ ತಂದೆ ಎ.ಎಂ.ಬಾಷಸಾಹೇಬ್ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಚೆಕ್ಕಿಂಗ್ ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 28-06-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು ಕೂಡ್ಲಿಗಿ.

ಇದರ ಪ್ರತಿಯನ್ನು:

1) ಅರ್ಜಿದಾರರಾದ ಎ.ಸೈಯದ್ ಹುಸೇನ್ ತಂದೆ ಎ.ಎಂ.ಬಾಷಾಸಾಹೇಬ್ 13 ನೇ ವಾರ್ಡ ಅಜಾದ್‌ನಗರ ಹೌಸಿಂಗ್ ಬೋರ್ಡ ಕೂಡ್ಲಿಗಿ ಪಟ್ಟಣ ಕೂಡ್ಲಿಗಿ ತಾಲೂಕು ಬಿ.ಮಹ್ನದ್ ತಂದೆ ಲೇಟ್ ಬಿ.ಹಯಾತ್ ಸಾಬ್ ಹಾಗೂ ಇತರರು 13 ನೇ ವಾರ್ಡ ರಾಮನಗರ ಕೂಡ್ಲಿಗಿ ಪಟ್ಟಣ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಕೆ.ಬಾಷಾಸಾಹೇಬ್ ತಂದೆ ತಂದೆ ಲೇಟ್ ಅಬ್ದುಲ್ ರಹಿಮಾನ್ ಸಾಬ್ 03 ನೇ ವಾರ್ಡ ಹೊಸಹಳ್ಳಿ ರಸ್ತೇ ಬಲಬಾಗ ಕೂಡ್ಲಿಗಿ ಪಟ್ಟಣ ಕೂಡ್ಲಿಗಿ ತಾಲೂಕು ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕವೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.

ದೃಢೀಕೃತ ನಕಲು

ಶಿರಸ್ತೇದಾರರು
ತಾಲೂಕು ಕಛೇರಿ
ಕೂಡ್ಲಿಗಿ.